**ದಿನಾಂಕಃ 27.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಸಹಿ ನನ್ನದೇ ಇರುತ್ತದೆ.

**ಮುಂದುವರೆದ ಮುಖ್ಯವಿಚಾರಣೆ : ಪ್ರತಿವಾದಿಯ ಪರ ವಕೀಲರಿಂದಃ**

1. ದೃಢೀಕೃತ ಕ್ರಯ ಪತ್ರವನ್ನು ನಿಡಿ **1** ಎಂದು, ಅದರ ಬೆರಳಚ್ಚು ಪ್ರತಿಯನ್ನು ನಿಡಿ **1(ಎ)** ಎಂದು, ರುಣಭಾರ ಪ್ರಮಾಣ ಪತ್ರವನ್ನು ನಿಡಿ **2** ಎಂದು, ಪಟ್ಟಾ ಬುಕ್ ನ್ನು ನಿಡಿ **3** ಎಂದು, ತಹಶೀಲ್ದಾರರ ನೋಟೀಸುಗಳ 3 ಪ್ರತಿಗಳು ಹಾಗೂ ಖಾತೆ ಬದಲಾವಣೆ ಮಾಡಿಕೊಂಡ ಬಗ್ಗೆ ಹಾಜರುಪಡಿಸಿದ ದಾಖಲೆಗಳನ್ನು ನಿಡಿ **4** ರಿಂದ ನಿಡಿ **10** ಎಂದು, ಸ. ನಂ. 209ರ ಕೈಬರಹ ಪಹಣಿಗಳನ್ನು ಒಟ್ಟಾಗಿ ನಿಡಿ **11** ಎಂದು, ಸ. ನಂ. 210ಎ ಪಹಣಿಗಳನ್ನು ಒಟ್ಟಾಗಿ ನಿಡಿ **12** ಎಂದು, ಸ. ನಂ. 209ರ ಪಹಣಿ ನಿಡಿ **13** ಎಂದು, ಸ. ನಂ. 209/1ರ ಪಹಣಿಗಳನ್ನು ನಿಡಿ **14** ಎಂದು ಮತ್ತು ಸ. ನಂ. 210ಎ1 ರಿಂದ 210ಬಿ ರ ಪಹಣಿಗಳನ್ನು ಒಟ್ಟಾಗಿ ನಿಡಿ **15** ಎಂದು, ಕಂದಾಯಿ ರಸೀದಿಗಳನ್ನು ನಿಡಿ **16** ಮತ್ತು ನಿಡಿ **17** ಎಂದು, ಕ್ರಯ ಪತ್ರವನ್ನು ನಿಡಿ **18** ಎಂದು, ದಾನ ಪತ್ರವನ್ನು ನಿಡಿ **19** ಎಂದು**,** ಮರಣ ಸಮರ್ಥನೆ ಪತ್ರಗಳನ್ನು ನಿಡಿ **20** ಮತ್ತು ನಿಡಿ **21** ಎಂದು, ಹಕ್ಕು ಬದಲಾವಣೆ ವಹಿಗಳನ್ನು ನಿಡಿ **22** ಮತ್ತು ನಿಡಿ **23** ಎಂದು ಹಾಗೂ ಮಾರುಕಟ್ಟೆ ಮೌಲ್ಯಮಾಪನವನ್ನು ನಿಡಿ **24** ಎಂದು ಗುರುತಿಸಿತು.

**ಪಾಟೀಸವಾಲು : ವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ